**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಕುಂದಾಪುರ.**

**ಪಿಡಬ್ಲ್ಯೂ:4**

**ಸ್ಪೆಷಲ್ ಕೇಸ್ ಸಂಖ್ಯೆ: 501/25 ಸಿಡಬ್ಲ್ಯೂ:5**

| | | |
|---|---|---|
| ಸಾಕ್ಷಿದಾರರ ಹೆಸರು | : | ಶ್ರೀಮತಿ ಜ್ಯೋತಿ ರವೀಂದ್ರ |
| ಗಂಡನ ಹೆಸರು | : | ರವೀಂದ್ರ ದೊಂಬೆ |
| ವಯಸ್ಸು | : | 49 |
| ವೃತ್ತಿ | : | ಮನೆವಾರ್ತೆ |
| ವಾಸ | : | ಬೈಂದೂರು |

**<u>ದಿನಾಂಕ: 05-03-2026</u> ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**<u>ಮುಖ್ಯ ವಿಚಾರಣೆ</u> : ಸರ್ಕಾರಿ ಅಭಿಯೋಜಕರಿಂದ**

ಚಾಸಾ.2 ರವೀಂದ್ರ ದೊಂಬೆ ನನ್ನ ಗಂಡ. ಸತೀಶ್ ಕಂಚಗೋಡು ಇವರ ಪರಿಚಯ ನನಗೆ ಇಲ್ಲಾ ಆದರೆ ನನ್ನ ಗಂಡನಿಗೆ ಅವರು ಪರಿಚಯ. ಬೈಂದೂರು ತಾಲೂಕು ಪಡುವರಿ ಗ್ರಾಮದಲ್ಲಿ ಸರ್ವೇ ನಂಬ್ರ 103/14 ರಲ್ಲಿ 0.30 ಎಕ್ರೆ ಜಾಗ ನನ್ನ ಹೆಸರಿನಲ್ಲಿದೆ. ಸದ್ರಿ ಜಾಗವನ್ನು 2011 ನೇ ಇಸವಿಯಲ್ಲಿ ನನ್ನ ಗಂಡ ನಾಗೇಶ್ ಎನ್ನುವವರಿಂದ ನನ್ನ ಹೆಸರಿ ಖರೀದಿ ಮಾಡಿದ್ದು ಅದರಂತೆ ಪಹಣಿ ಪತ್ರಿಕೆಯಲ್ಲಿ ನನ್ನ ಹೆಸರು ದಾಖಲಾಗಿದೆ. ಸದ್ರಿ ಜಾಗವನ್ನು ಸತೀಶ್ ಕಂಚಗೋಡು ಇವರಿಗೆ ಮಾರಾಟ ಮಾಡಬೇಕು ಅಂತ ನನ್ನ ಗಂಡ ನನಗೆ ತಿಳಿಸಿದ್ದರು. ದಿನಾಂಕ:16-11-2024 ರಲ್ಲಿ ಸರ್ವೇ ಅಧಿಕಾರಿಗಳು ಸದ್ರಿ ಸ್ಥಳದ ಸರ್ವೇಗೆ ಬಂದಾಗ ಸುಬ್ರಾಯ ಎನ್ನುವವರು ತಕರಾರು ಮಾಡಿರುತ್ತಾರೆ ಅಂತ ನನ್ನ ಗಂಡ ನನಗೆ ತಿಳಿಸಿರುತ್ತಾರೆ. ಸತೀಶ್ ಕಂಚಗೋಡು ರವರಿಗೆ ಸುಬ್ರಾಯ ಮತ್ತು ಇತರರ ನಡುವೆ ಮಾತುಕತೆಯಾಗಿದೆ ಎಂದು ನನ್ನ ಗಂಡ ನನಗೆ ತಿಳಿಸಿದರು. ಈ ಬಗ್ಗೆ ಸತೀಶ್ ಕಂಚಗೋಡು ರವರು ಪೋಲೀಸರಿಗೆ ಫಿರ್ಯಾದಿ ನೀಡಿರುತ್ತಾರೆ ಎಂದು ನನ್ನ ಗಂಡ ನನಗೆ ತಿಳಿಸಿದರು. ಈ ಬಗ್ಗೆ ಪೋಲೀಸರು ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ.

<u>ಪಾಟೀ ಸವಾಲುಃ</u> **1** ರಿಂದ **3** ನೇ ಆರೋಪಿತರ ಪರ ವಕೀಲರಾದ ಶ್ರೀ ಎಂ ಜೆ ಎಸ್ ರವರಿಂದ

ನಾನು ಈ ದಿನ ಸಾಕ್ಷ್ಯದಲ್ಲಿ ಹೇಳಿದ ವಿಚಾರವೆಲ್ಲಾ ನನ್ನ ಗಂಡನಿಂದ ನನಗೆ ತಿಳಿಯಿತು. ಪೋಲೀಸರಿಗೆ ಎಲ್ಲಾ ಮಾಹಿತಿ ಕೊಟ್ಟಿದ್ದು ನನ್ನ ಗಂಡ. ನಾನು ವೈಯುಕ್ತಿಕವಾಗಿ ಪೋಲೀಸು ಠಾಣೆಗೆ ಹೋಗಿಲ್ಲ ಮತ್ತು ಘಟನೆಗೆ ಸಂಬಂಧಪಟ್ಟಂತೆ ಯಾವುದೇ ಹೇಳಿಕೆ ನೀಡಿಲ್ಲ. ಇಲ್ಲಿಯವರೆಗೆ ನನಗೆ ಆಸ್ತಿ ಮಾರಾಟದ ಬಗ್ಗೆ ಹಣ ಬಂದಿತಾ ಎಂದರೆ ಸಾಕ್ಷಿ ಹಣ ಬಂದಿಲ್ಲ ಆದರೆ ಚೆಕ್ ನನಗೆ ಬಂದಿದ್ದು ಅದು ಮನೆಯಲ್ಲಿದೆ ಅದನ್ನು ನಾವು ಪೋಲೀಸರಿಗೆ ನೀಡಿಲ್ಲ. ನಾನು ಖರೀದಿ ಮಾಡಿದಂತಹಾ ಜಾಗ ಆರೋಪಿತರು ತಮ್ಮ ಜಾಗ ಎಂದು ಸಾಧನೆ ಮಾಡುತ್ತಿದ್ದ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಮತ್ತು ನನ್ನ ಗಂಡನ ವಿರುದ್ಧ ಆರೋಪಿತರು ನಾನು ಖರೀದಿ ಮಾಡಿದೆ ಅಂತ ಹೇಳುವ ಜಾಗದ ವಿರುದ್ಧ ದಾವೆ ಹೂಡಿ ತಡೆಯಾಜ್ಞೆ ಪಡೆದುಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಹೊರಗಿನ ಜನರನ್ನು ಕರೆಸಿ ಆರೋಪಿತರ ಜಾಗಕ್ಕೆ ತೊಂದರೆ ಮಾಡಲು ನನ್ನ ಗಂಡ ಪ್ರಯತ್ನ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

<u>ಮರು ವಿಚಾರಣೆಃ</u> ಇಲ್ಲ.

(ನನ್ನ ಉಕ್ತಲೇಖನದಂತೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ಹೇ ಕೆ ಸರಿ ಇದೆ.**

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
**ಕುಂದಾಪುರ**